ಒ.ಎಸ್. ನಂ.135/2022
ಪಿಡಬ್ಲ್ಯು-1

ದಿನಾಂಕ 12.08.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟಿ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಾನು ಈ ದಾವೆಯನ್ನು ಸರ್ವೆ ನಂ.22 ರ ಮೇಲೆ ಸಲ್ಲಿಸಿರುತ್ತೇನೆ. ಸದರಿ ದಾವೆಯನ್ನು ಜಾಗ ಖಾಲಿ ಮಾಡುವ ವಿಚಾರವಾಗಿ ಹಾಕಿರುತ್ತೇನೆ. ದಾವಾ ಸ್ವತ್ತು ಮೂಲತಃ ನನ್ನ ತಂದೆಯ ಹೆಸರಿನಲ್ಲಿರುತ್ತದೆ. ನನಗೆ ದಾವಾ ಸ್ವತ್ತು ಯಾವ ಆಧಾರದ ಮೇಲೆ ಬಂದಿರುತ್ತದೆ ಎಂದರೆ ಸಾಕ್ಷಿ ಪಿತ್ರಾರ್ಜಿತ ಆಸ್ತಿಯಾಗಿರುವುದರಿಂದ ನನ್ನ ಹೆಸರಿಗೆ ಆಗಿರುತ್ತದೆ ಎಂದು ಹೇಳುತ್ತಾರೆ. ದಾವಾ ಸ್ವತ್ತು ನನ್ನ ಹೆಸರಿಗೆ 1992 ರಿಂದ 1994 ರ ಅವಧಿಯಲ್ಲಿ ಆಗಿರುತ್ತದೆ. ಸರ್ವೆ ನಂ.22 ರಲ್ಲಿ ಮೊದಲು ನಾಲ್ಕು ಹಿಸ್ಸೆಗಳಿದ್ದು ಈಗ ಹೆಚ್ಚಿನ ಹಿಸ್ಸೆಗಳಾಗಿವೆ. ಮುತ್ತಣ್ಣ, ಶಿವಶರಣಪ್ಪ ಮತ್ತು ಓಗೆಪ್ಪ ರವರ ಹೆಸರಿನಲ್ಲಿ ಹಿಸ್ಸೆಗಳಿರುತ್ತವೆ. ಸದರಿ ಹೆಸರು ದಾವಾಸ್ತಿಯ ಹಿಸ್ಸೆಗಳಿವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿಗೆ ದಾವಾ ಆಸ್ತಿಯ ಏನು ಹಕ್ಕಿದೆ ಎಂದರೆ ಸಾಕ್ಷಿ ನಾನು ಇರಲು ಜಾಗ ಕೊಟ್ಟಿದ್ದೆ ಆದರೆ ಪ್ರತಿವಾದಿಯು ಖರೀದಿ ತೆಗೆದುಕೊಂಡಿರುತ್ತೇನೆ ಎಂದು ಹೇಳುತ್ತಿದ್ದಾನೆ. ನಾನು ಪ್ರತಿವಾದಿಗೆ ಯಾವುದೆ ಕಾಗದ ಪತ್ರ ಬರೆದುಕೊಟ್ಟಿಲ್ಲ. ಸರ್ವೆ ನಂ.22 ರಲ್ಲಿ 100 ಮನೆಗಳಿರಬಹುದು. ಪ್ರತಿವಾದಿಯು ಮನೆ ಕಟ್ಟಲು ಪರವಾನಿಗೆ ಪಡೆದಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಮತ್ತು ಯಾವ ವರ್ಷದಲ್ಲಿ ಪರವಾನಿಗೆ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.22 ರಲ್ಲಿ 100 ಮನೆಗಳಿದ್ದು ಅವರ ಹೆಸರುಗಳು ಹೇಳಲಾಗವುದಿಲ್ಲ ಆದರೆ ಅವರ ಯಾದಿ ಕೊಡುತ್ತೇನೆ ಎಂದು ಹೇಳುತ್ತಾರೆ. ಸರ್ವೆ ನಂ.22 ರಲ್ಲಿರುವ ಮನೆಗಳ ಮಾಲಿಕರನ್ನು ಏಕೆ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸಾಕ್ಷಿ ನನ್ನ ಹಿರಿಯರು ಜಾಗ ಬಿಟ್ಟುಕೊಟ್ಟಿರುವುದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ಈ ಕುರಿತು ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ. ಸರ್ವೆ ನಂ.22 ರಲ್ಲಿ 100 ಮನೆಗಳು ಎಷ್ಟು ಅಳತೆಯಲ್ಲಿ ನಿರ್ಮಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸದರಿ ಮನೆಗಳಿಗೆ 15 ಫೂಟು ರಸ್ತೆ ಬಿಟ್ಟಿರುತ್ತೇವೆ ಮತ್ತು ಅಲ್ಲಿ ನೀರಿನ ಮತ್ತು ವಿದ್ಯುತ್ ವ್ಯವಸ್ಥೆ ಇದೆ. ಸರ್ವೆ ನಂ.22 ರಲ್ಲಿ ಮನೆಗಳನ್ನು ಬಿಟ್ಟು 07-ಎಕರೆ ಇರುತ್ತದೆ. ಸರ್ವೆ ನಂ.22 ಕ್ಕೆ ಸಂಬಂಧಿಸಿದಂತೆ ನಾನು ಯಾವುದೆ ಸರ್ವೆ ಮಾಡಿಸಿಲ್ಲ. ಸದರಿ 100 ಮನೆಗಳು ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತರಾಜ ಇಲಾಖೆ ಸಂಬಂಧಪಟ್ಟಿರುತ್ತವೆಯೆ ಎಂದರೆ ಸಾಕ್ಷಿ ನನ್ನ ಹಿರಿಯರು 03-ಎಕರೆ ಜಾಗ ಕೊಟ್ಟಿರುತ್ತಾರೆ.

ದಾವಾಸ್ತಿಯು ಪ್ರತಿವಾದಿಗೆ ಸಂಬಂಧಿಸಿದ್ದು ಎಂದರೆ ಸರಿಯಲ್ಲ. ಪ್ರತಿವಾದಿಯು ದಾವಾಸ್ತಿಯನ್ನು ಮುತ್ತಪ್ಪ ಮಾದಪ್ಪ ಒಡೆಯರರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ ದಾವಾ ಸ್ವತ್ತನ್ನು ಖರೀದಿ ಮಾಡಿ ಪಂಚಾಯತಿಯಲ್ಲಿ ಮುಟೇಷನ ನಂ.53/2 ಎಂದು ಆಗಿರುತ್ತದೆ ಎಂದರೆ ಸರಿಯಲ್ಲ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟಿ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಇದೆ

ಸಿವಿಲ್ ನ್ಯಾಯಾಧೀಶರು
ಜೇವರ್ಗಿ